## ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ

**ಸೆಷನ್ಸ್ ಕೇಸ್ ನಂಃ 26/2023 ಅ.ಸಾ. 1**

**ಚಾ.ಸಾ.1**

| | | |
|---|---|---|
| ಸಾಕ್ಷಿದಾರರ ಹೆಸರು | - | ಶಾಂತಿ ಅಲಿಯಾಸ್ ದಿವ್ಯಾ ನಾಯಕ್ |
| ಗಂಡನ ಹೆಸರು | - | ದೀಪಕ್ ನಾಯಕ್ |
| ವಯಸ್ಸು | - | 43 ವರ್ಷ |
| ಉದ್ಯೋಗ | - | ವ್ಯಾಪಾರ |
| ವಿಳಾಸ | - | ಕಾಸರಗೋಡು |

ದಿನಾಂಕಃ 24-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1.ಮೃತ ಮಾಲತಿ ಕಾಮತ್ ನನ್ನ ತಾಯಿ. ನನ್ನ ತಾಯಿಗೆ ನಾವು ಮೂರು ಜನ ಹೆಣ್ಣು ಮಕ್ಕಳು ಇರುತ್ತೇವೆ. ಚಾಸಾ3 ನನ್ನ ಅಕ್ಕ. ಚಾಸಾ2 ನನ್ನ ತಂಗಿ. ಮದುವೆಯಾಗಿ ನಾನು ನನ್ನ ಗಂಡ ಹಾಗೂ ಮಕ್ಕಳ ಜೊತೆ ಕಾಸರಗೋಡಿನಲ್ಲಿ ವಾಸ ಮಾಡುತ್ತೇನೆ. ಚಾಸಾ2 ಕೋಟಾ ಬ್ರಹ್ಮಾವರ ತಾಲೂಕಿನಲ್ಲಿ ತನ್ನ ಗಂಡ ಮಕ್ಕಳೊಂದಿಗೆ ವಾಸವಾಗಿದ್ದಾಳೆ. ಚಾಸಾ.3 ವಿರಾಜಪೇಟೆಯಲ್ಲಿ ಮಕ್ಕಳ ಜೊತೆ ವಾಸ ಇದ್ದಾರೆ. ಆಕೆಯ ಗಂಡ ಮೃತ ಪಟ್ಟಿರುತ್ತಾರೆ. 20 ವರ್ಷಗಳ ಹಿಂದೆ ನನ್ನ ತಂದೆ ಮೃತ ಹೊಂದಿರುತ್ತಾರೆ. ನನ್ನ ತಾಯಿ ಉಡುಪಿ ತಾಲೂಕಿನ ಪುತ್ತೂರು ಗ್ರಾಮದ ವಿಷ್ಣುಮೂರ್ತಿ ನಗರದ ನಾಲ್ಕನೇ ಕ್ರಾಸ್‌ನಲ್ಲಿರುವ ಅವರ ಮನೆಯಲ್ಲಿ ಒಬ್ಬಂಟಿಯಾಗಿ ವಾಸ ಮಾಡುತ್ತಿದ್ದರು. ನಾವು ಮೂರೂ ಜನ ಆಗಾಗ ತಾಯಿಯ ಮನೆಗೆ ಹೋಗಿ ಬರುತ್ತಿದ್ದೆವು. ನನ್ನ ತಾಯಿಯ ಮನೆಯ ಪಕ್ಕದಲ್ಲಿ ಚಾಸಾ5 ಮತ್ತು 8 ರವರ ಮನೆಗಳು ಇರುತ್ತವೆ.

2.ದಿನಾಂಕ 13-02-2020 ರಂದು ನಾನು ಕಾಸರಗೋಡಿನ ನಮ್ಮ ಮನೆಯಲ್ಲಿದ್ದಾಗ ಬೆಳಿಗ್ಗೆ 7-45 ಕ್ಕೆ ಚಾಸಾ4 ರವರು ನನಗೆ ಪೋನ್ ಕರೆ ಮಾಡಿ ನಿಮ್ಮ ತಾಯಿ ಮಲಗಿದ ಸ್ಥಿತಿಯಲ್ಲಿದ್ದಾರೆ ಅವರ ಮೂಗು ಮತ್ತು ಬಾಯಿಯಲ್ಲಿ ತಲೆದಿಂಬು ಇಟ್ಟಿರುವುದು

ಕಂಡುಬಂದಿರುತ್ತದೆ ಎಂದು ತಿಳಿಸಿರುತ್ತಾರೆ. ಕೂಡಲೇ ನಾನು ಗಂಡನೊಂದಿಗೆ ಹೊರಟು ತಾಯಿಯ ಮನೆಗೆ ಬಂದಿರುತ್ತೇವೆ. ನಾನು ನೋಡುವಾಗ ನನ್ನ ತಾಯಿ ಹಾಲ್‌ನಲ್ಲಿ ಮಂಚದ ಮೇಲೆ ಮಲಗಿದ ಸ್ಥಿತಿಯಲ್ಲಿದ್ದು ಮುಖದ ಮೇಲೆ ನೀಲಿ ಬಣ್ಣದ ತಲೆದಿಂಬು ಕಂಡುಬಂತ್ತು. ಎಡ ಕಿವಿ ಹರಿದು ಹೋಗಿದ್ದು ರಕ್ತ ಹೆಪ್ಪು ಗಟ್ಟಿತ್ತು. ಅವರು ಮೃತ ಪಟ್ಟಿದ್ದರು. ಅದೇ ಸಮಯ ಪೋಲಿಸರು ಸಹಾ ತಾಯಿಯ ಮನೆಗೆ ಬಂದಿದ್ದರು. ನಮ್ಮ ತಾಯಿಯು ಯಾವಾಗಲೂ ಚಿನ್ನದ ಬೆಂಡೋಲೆ ಹಾಗೂ ಕುತ್ತಿಗೆಯಲ್ಲಿ ಚಿನ್ನದ ಸರ ಧರಿಸುತ್ತಿದ್ದು ಅವುಗಳು ಕಂಡುಬಂದಿರುವುದಿಲ್ಲ.

3.ಕೋಣೆಯಲ್ಲಿದ್ದ ಕಪಾಟು ತೆರೆದುಕೊಂಡಿತ್ತು, ಬಟ್ಟೆಗಳು ಚೆಲ್ಲಾಪಿಲ್ಲಿಯಾಗಿದ್ದು ಕಪಾಟನ್ನು ನೋಡಲಾಗಿ ನಮಗೆ ಸೇರಿದ ಹಣದ ಪೈಕಿ ರೂ.50,000/- ಕಾಣೆಯಾಗಿತ್ತು ಹಾಗೂ ನನಗೆ ಮತ್ತು ಚಾಸಾ.2 ಮತ್ತು 3 ರವರಿಗೆ ಸೇರಿದ ಆಭರಣಗಳು ಸಹಾ ಕಾಣೆಯಾಗಿದ್ದವು. ಮನೆ ಕಟ್ಟುವ ಉದ್ದೇಶದಿಂದ ಸಾಲ ತೆಗೆಯಲು ಚಿನ್ನವನ್ನು ಅಡಮಾನ ಮಾಡಲು ನನಗೆ ಹಾಗೂ ಚಾಸಾ.2 ಮತ್ತು 3 ರವರಿಗೆ ಸೇರಿದ ಚಿನ್ನಾಭರಣಗಳನ್ನು ನಮ್ಮ ತಾಯಿ ಮನೆಯಲ್ಲಿ ಇಟ್ಟಿದ್ದೆವು. ಎರಡು ಬೀರುಗಳ ಪೈಕಿ ಒಂದು ಬೀರುವಿನ ಕೀ ಆರೋಪಿತರಿಗೆ ಸಿಕ್ಕಿದ್ದು, ಇನ್ನೊಂದು ಕೀ ಸಿಕ್ಕಿಲ್ಲದೇ ಇದ್ದ ಕಾರಣ ಇನ್ನೊಂದು ಬೀರುವಿನಲ್ಲಿದ್ದ ರೂ.1,50,000/- ನಗದು ಮತ್ತು ನನ್ನ ತಾಯಿಗೆ ಸೇರಿದ ಕೆಲವು ಚಿನ್ನಾಭರಣಗಳು ಯಥಾ ಸ್ಥಿತಿಯಲ್ಲಿತ್ತು. ಒಂದು ಬೀರುವಿನಲ್ಲಿದ್ದ ಚಿನ್ನಾಭರಣ ಹಾಗೂ ನಗದು ರೂ.50,000/- ವನ್ನು ಆರೋಪಿತರು ಕೊಂಡ್ಯೊದ್ದಿರುತ್ತಾರೆ. ತಾಯಿಯ ಕೈಯಲ್ಲಿದ್ದ ಎರಡು ಚಿನ್ನದ ಬಳೆಗಳನ್ನು ತೆಗೆಯಲು ಆಗದೇ ಇದ್ದ ಕಾರಣ ಆರೋಪಿತರು ಅವುಗಳನ್ನು ಹಾಗೆಯೇ ಬಿಟ್ಟು ಹೋಗಿರುತ್ತಾರೆ.

4.ಹಳೆಯ ಮನೆಯನ್ನು ಅರ್ಧ ಕೆಡವಿ ಹೊಸ ವಾಸದ ಮನೆಯನ್ನು ನಮ್ಮ ತಾಯಿ ಕಟ್ಟಿಸುತ್ತಿದ್ದರು. ಈ ಬಗ್ಗೆ ಮಾಧವ ಎನ್ನುವ ವ್ಯಕ್ತಿಗೆ ಮನೆ ಕಟ್ಟುವ ಕಾಂಟ್ರಾಕ್ಟ್ ನೀಡಿದ್ದರು. ಘಟನೆ ನಡೆದ ಸಮಯದಲ್ಲಿ ಮನೆ ಕಟ್ಟುವ ಕೆಲಸದ ಬಾಬ್ತು ಪಂಚಾಂಗ ಹಾಕುವಲ್ಲಿಗೆ ಕೆಲಸ ಆಗಿತ್ತು. ಪಂಚಾಂಗಕ್ಕೆ ಅದೇ ಮಾಧವ ಎಂಬ ವ್ಯಕ್ತಿ ನೀರು ಹಾಕುತ್ತಿದ್ದರು. ಹಳೆ ಮನೆಯ ರಿಪೇರಿ ಮಾಡುತ್ತಿದ್ದ ಕಾರಣ ಒಂದು ಕಡೆಯ ಗೋಡೆಯನ್ನು ತೆಗೆಯಲಾಗಿದ್ದು ಅದಕ್ಕೆ ಟರ್ಪಾಲು ಹಾಕಲಾಗಿತ್ತು. ಸಾಮಾನ್ಯವಾಗಿ ನನ್ನ ತಾಯಿ ಯಾವಾಗಲೂ ಮಂಚದಲ್ಲಿಯೇ ಮಲಗುತ್ತಿದ್ದರು. ನಾನು ಅದೇ ದಿನ ಸ್ಥಳದಲ್ಲಿಯೇ ಪೋಲಿಸರಿಗೆ ಲಿಖಿತ ದೂರನ್ನು ನೀಡಿರುತ್ತೇನೆ. ದೂರಿನ ಮೂಲ ಪ್ರತಿಯನ್ನು ನಿಪಿ-1 ಎಂದು ಎಸ್.ಸಿ. ನಂ.1/2021 ರಲ್ಲಿ ಗುರುತಿಸಿದ್ದು ಅದರ ದೃಢೀಕೃತ ಪ್ರತಿಯನ್ನು ನಿಪಿ-1

ಪಿ-1 ಎಂದು ಈ ಪ್ರಕರಣದಲ್ಲಿ ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಶಾನೆ ಪಿ-1(ಎ) ಎಂದು ಮೂಲ ಪ್ರಕರಣದಲ್ಲಿ ಗುರುತಿಸಲಾಗಿದೆ. ಪೋಲಿಸರು ನನ್ನ ತಾಯಿಯ ಶವದ ಮೇಲೆ ಶವ ಪಂಚನಾಮೆ ಜರುಗಿಸಿರುತ್ತಾರೆ ಹಾಗೂ ಪೋಟೊಗಳನ್ನು ತೆಗೆದಿರುತ್ತಾರೆ. ತಾಯಿಯ ಕುತ್ತಿಗೆಯಲ್ಲಿ ಗಾಯ ಇತ್ತು. ಎಡ ಕಿವಿ ಹರಿದಿತ್ತು. ಎರಡೂ ಕೈಗಳಲ್ಲಿ ತರಚಿದ ಗಾಯಗಳಾಗಿತ್ತು. ಕಾಲಿನಲ್ಲೂ ಸಹಾ ಗಾಯವಾಗಿತ್ತು. ನನ್ನ ತಾಯಿ ಬಣ್ಣದ ಸೀರೆ, ಲಂಗ, ರವಕೆ ತೊಟ್ಟಿದ್ದರು. ಆಕೆಯ ಮೂಗು ಚಪ್ಪಟೆಯಾಗಿತ್ತು. ಮೂಗಿನಲ್ಲಿ ಮೂಗುತ್ತಿ ಹಾಗೆಯೇ ಇತ್ತು. ಶವ ತನಿಖಾ ಕಾಲದಲ್ಲಿ ಮೂರು ಛಾಯಾ ಚಿತ್ರಗಳನ್ನು ತೆಗೆಯಲಾಗಿದ್ದು, ಅವುಗಳಲ್ಲಿ ನನ್ನ ತಾಯಿಯ ಶವದ ಸ್ಥಿತಿ ಕಂಡುಬರುತ್ತದೆ. ಅವುಗಳನ್ನು ಈಗ ನೋಡುತ್ತಿದ್ದು, ಛಾಯಾ ಚಿತ್ರಗಳನ್ನು ನಿಪಿ-2 ರಿಂದ 4 ಎಂದು ಮೂಲ ಪ್ರಕರಣದಲ್ಲಿ ಗುರುತಿಸಲಾರಿದ್ದು ಈ ಪ್ರಕರಣದಲ್ಲಿ ಸಹಾ ನಿಪಿ-2 ರಿಂದ 4 ಎಂದು ಗುರುತಿಸಲಾಯಿತು. ನಂತರ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಮಣಿಪಾಲ ಆಸ್ಪತ್ರೆಗೆ ಕೊಂಡು ಹೋಗಿರುತ್ತಾರೆ. ತದನಂತರ ಘಟನಾ ಸ್ಥಳದಲ್ಲಿ ಪೋಲಿಸರು ಒಂದು ಮಹಜರು ಬರೆದಿರುತ್ತಾರೆ. ಆ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸದ್ರಿ ಮಹಜರನ್ನು ನಿಶಾನೆ ಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-5(ಎ) ಎಂದು ಮೂಲ ಪ್ರಕರಣದಲ್ಲಿ ಗುರುತಿಸಲಾಗಿದ್ದು ಈ ಪ್ರಕರಣದಲ್ಲಿ ಅದರ ದೃಢೀಕೃತ ಪ್ರತಿಯನ್ನು ನಿಪಿ-5 ಎಂದು ಗುರುತಿಸಲಾಯಿತು. ನನ್ನ ತಾಯಿ ಇದ್ದ ಮನೆಯ ಹಾಲ್ ಹಾಗೂ ಬೀರುಗಳನ್ನು ಇಟ್ಟಂತಹಾ ಕೋಣೆಯ ಪೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ಮೂಲ ಪ್ರಕರಣದಲ್ಲಿ ನಿಶಾನೆ ಪಿ-6 ಮತ್ತು 7 ಎಂದು ಗುರುತಿಸಿದ್ದು ಈ ಪ್ರಕರಣದಲ್ಲಿ ಸಹಾ ನಿಪಿ-6 ಮತ್ತು 7 ಎಂದು ಗುರುತಿಸಲಾಯಿತು. ಯಥಾ ಸ್ಥಿತಿಯಲ್ಲಿದ್ದ ಇನ್ನೊಂದು ಬೀರುವಿನ ಕೀ ಯನ್ನು ಹುಡುಕಿದಾಗ ಸಿಕ್ಕಿದ್ದು ಪೋಲಿಸರು ಆ ಬೀರುವಿನ ಒಳಗೆ ಇದ್ದ ರೂ.1,50,000/- ಮತ್ತು ತಾಯಿಯ ಚಿನ್ನಾಭರಣಗಳನ್ನು ನನ್ನ ವಶಕ್ಕೆ ಕೊಟ್ಟಿರುತ್ತಾರೆ. ಆಗ ಒಂದು ಭಾವ ಚಿತ್ರ ತೆಗೆದಿದ್ದು ಅದನ್ನು ನಿಶಾನೆ ಪಿ-8 ಎಂದು ಮೂಲ ಪ್ರಕರಣದಲ್ಲಿ ಗುರುತಿಸಿದ್ದು ಈ ಪ್ರಕರಣದಲ್ಲಿ ಸಹಾ ನಿಪಿ-8 ಎಂದು ಗುರುತಿಸಲಾಯಿತು.

5. ಘಟನಾ ಸ್ಥಳವನ್ನು ಮತ್ತು ತಾಯಿಯ ಶವವನ್ನು ನೋಡಿ ಯಾರೋ ದುಷ್ಕರ್ಮಿಗಳು ನನ್ನ ತಾಯಿಯನ್ನು ಕೊಲೆ ಮಾಡಿ ಚಿನ್ನಾಭರಣಗಳನ್ನು ದೋಚಿರುತ್ತಾರೆ ಎಂದು ಗೊತ್ತಾಯಿತು. ದಿನಾಂಕ 19-02-2020 ರಂದು ಪೋಲಿಸರು ನನ್ನನ್ನು ಹಾಗೂ ಚಾಸಾ2 ಮತ್ತು 3 ರವರನ್ನು ಠಾಣೆಗೆ ಕರೆಸಿರುತ್ತಾರೆ. ಈಗ ನನಗೆ ವೀಡಿಯೋ ಕಾನ್ಪರೆನ್ಸ್ ಮೂಲಕ ತೋರಿಸಿದ ಆರೋಪಿಯನ್ನು

ನೋಡಿ ಗುರುತಿಸಿದ್ದು, ಈ ಆರೋಪಿ ಮತ್ತು ಮೂಲ ಪ್ರಕರಣದ ಆರೋಪಿಯೇ ನನ್ನ ತಾಯಿಯನ್ನು ಕೊಲೆ ಮಾಡಿ ಹಣ ಮತ್ತು ಆಭರಣಗಳನ್ನು ದೋಚಿರುವುದಾಗಿ ತಿಳಿಸಿರುತ್ತಾರೆ. ಈ ಆರೋಪಿತರು ಚಾಸಾ.7 ರವರ ಜೊತೆ ನಮ್ಮ ಮನೆಯ ಕೆಲಸಕ್ಕೆ ಬಂದ ವ್ಯಕ್ತಿಗಳು ಆಗಿರುತ್ತಾರೆ.

6.ನನಗೆ ಸೇರಿದ ಸುಮಾರು ಮೂರುವರೆ ನಾಲ್ಕು ಪವನ್ ತೂಕದ ಎರಡು ಚಿನ್ನದ ಮುತ್ತಿನ ಬಳೆ, ಮುಕ್ಕಾಲು ಪವನ್ ತೂಕದ ಕೆಂಪು ಮಣಿಯ ಜೋಮಾಲೆ ಸರ, ಅರ್ಧ ಪವನ್ ತೂಕದ ಒಂದು ಬಿಳಿ ಕಲ್ಲಿನ ಉಂಗುರ, ಮಗುವಿನ ಇನ್ನೊಂದು ಮೂರು ಗ್ರಾಂ ತೂಕ ಇರುವ ಚಿನ್ನದ ಉಂಗುರ, ನನ್ನ ಮಗನ ಒಂದೂವರೆ ಪವನ್ ತೂಕದ ಚಿನ್ನದ ಬ್ರಾಸ್ ಲೈಟ್ ಕಾಣೆಯಾಗಿತ್ತು.

7.ಚಾಸಾ.3 ರವರಿಗೆ ಸೇರಿದ ಒಂದು ಉದ್ದ ಸರ ಹಾಗೂ ಇನ್ನೊಂದು ಆಭರಣ ಕಾಣೆಯಾಗಿತ್ತು. ಚಾಸಾ.2 ರವರಿಗೆ ಸಂಬಂಧಿಸಿದ ಕೆಲವು ಆಭರಣಗಳು ಸಹ ಕಾಣೆಯಾಗಿತ್ತು. ಬೆಳ್ಳಿಯ ಆರು ನಾಣ್ಯಗಳು ಕಾಣೆಯಾಗಿದ್ದವು. ನಮಗೆ ಸೇರಿದ ಆಭರಣಗಳನ್ನು ಪೋಲಿಸರು ವಶಪಡಿಸಿಕೊಂಡ ವಿಚಾರ ತಿಳಿದು ಪೋಲಿಸ್ ಠಾಣೆಗೆ ಹೋಗಿದ್ದೆವು. ವಶಪಡಿಸಿಕೊಂಡ ಆಭರಣ ಗಳನ್ನು ನಮಗೆ ತೋರಿಸಿರುತ್ತಾರೆ. ನಂತರ ನಾವು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಆ ಎಲ್ಲಾ ಆಭರಣಗಳನ್ನು ಸುಪರ್ದಿಯನ್ನು ಪಡೆದಿರುತ್ತೇವೆ. ನಮ್ಮ ತಾಯಿಯ ಕಿವಿಯಲ್ಲಿದ್ದ ಒಂದು ಜೊತೆ ಬೆಂಡೋಲೆ ಹಾಗೂ ಒಂದು ಚಿನ್ನದ ಕೊತ್ತೊಂಬರಿ ಸರ ಸಹಾ ಪೋಲಿಸರು ವಶಪಡಿಸಿಕೊಂಡಿದ್ದು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಅವುಗಳನ್ನು ಸಹ ನಮ್ಮ ವಶಕ್ಕೆ ಪಡೆದುಕೊಂಡಿರುತ್ತೇವೆ.

8.ಘಟನೆ ದಿನ ನನ್ನ ತಾಯಿ ಧರಿಸಿದ್ದ ಬಟ್ಟೆಗಳು ಹಾಗೂ ತಾಯಿಯ ಮುಖದ ಮೇಲಿದ್ದ ತಲೆದಿಂಬನ್ನು ನೋಡಿದರೆ ಗುರುತಿಸಬಹುದು. ಪ್ಯಾಕ್ ಮಾಡಲಾದ ಮುದ್ದೆಮಾಲುಗಳನ್ನು ತೆರೆದು ಸಾಕ್ಷಿಗೆ ತೋರಿಸಲಾಗಿ, ನೀಲಿ ಬಣ್ಣದ ತಲೆದಿಂಬು, ಕಂದು ಬಣ್ಣದ ಹಸಿರು ಚುಕ್ಕೆಗಳಿರುವ ಸೀರೆ, ಗುಲಾಬಿ ಬಣ್ಣದ ಲಂಗ, ಸಿಮೆಂಟ್ ಬಣ್ಣದ ರವಕೆ, ಇವುಗಳನ್ನು ಕ್ರಮವಾಗಿ ಮುದ್ದೆಮಾಲು-1 ರಿಂದ 4 ಎಂದು ಎಸ್.ಸಿ.ನಂ.1/2021 ರಲ್ಲಿ ಗುರುತಿಸಲಾಗಿದೆ. ಈ ಪ್ರಕರಣದಲ್ಲಿ ಸಹಾ ಅವುಗಳನ್ನು ಮುದ್ದೆಮಾಲು-1 ರಿಂದ 4 ಎಂದು ಗುರುತಿಸಲಾಯಿತು. ನಮಗೆಲ್ಲರಿಗೂ ಸೇರಿದ ಆಭರಣಗಳನ್ನು ನ್ಯಾಯಾಲಯದ ಆದೇಶದ ಮೇರೆಗೆ ನನ್ನ ಸುಪರ್ದಿಗೆ ನೀಡಿದಾಗ ಪೋಟೋ ತೆಗೆಯಲಾಗಿದ್ದು, ಆ ಪೋಟೋವನ್ನು ನಿಶಾನೆ ಪಿ-9, ಆಭರಣಗಳು ಹಾಗೂ ಬೆಳ್ಳಿಯ ನಾಣ್ಯಗಳು ಇರುವ ಪೋಟೋವನ್ನು ನಿಶಾನೆ ಪಿ-10, ಆ ಸಮಯದಲ್ಲಿ ತಯಾರಿಸಿದ ಮಹಜರನ್ನು ನಿಶಾನೆ ಪಿ-11 ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಮೂಲ ಪ್ರಕರಣ ಎಸ್.ಸಿ.ನಂ.1/2021 ರಲ್ಲಿ

ಗುರುತಿಸಲಾಗಿದೆ. ಈ ಪ್ರಕರಣದಲ್ಲಿ ಸಹಾ ಪೋಟೋಗಳನ್ನು ನಿಪಿ-9 ಮತ್ತು 10 ಎಂದು ಗುರುತಿಸಿದ್ದು, ಮಹಜರಿನ ದೃಢೀಕೃತ ಪ್ರತಿಯನ್ನು ನಿಪಿ-11 ಎಂದು ಗುರುತಿಸಲಾಯಿತು. ಆರೋಪಿಗಳ ಹೆಸರು ಅಶೋಕ ಹಾಗೂ ಆನಂದ ಎಂದು ತಿಳಿಯಿತು. ದೂರು ನೀಡುವ ಸಮಯದಲ್ಲಿ ಆಭರಣ ಬಗ್ಗೆ ನಿಖರವಾಗಿ ಹೇಳದೇ ಇದ್ದ ಕಾರಣ ನಂತರ ಲಿಖಿತವಾಗಿ ಪೋಲಿಸರಿಗೆ ಅಭರಣಗಳ ವಿವರವನ್ನು ನೀಡಿದ್ದು ಅದನ್ನು ನಿಶಾನೆ ಪಿ-12, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-12(ಎ) ಎಂದು ಮೂಲ ಪ್ರಕರಣ ಎಸ್.ಸಿ.ನಂ.1/2021 ರಲ್ಲಿ ಗುರುತಿಸಲಾಯಿತು. ಸ್ಥಳದ ಕಚ್ಚಾ ನಕ್ಷೆಯನ್ನು ನೋಡುತ್ತಿದ್ದು ನಿಶಾನೆ ಪಿ-13, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-13(ಎ) ಎಂದು ಮೂಲ ಪ್ರಕರಣ ಎಸ್.ಸಿ.ನಂ.1/2021 ರಲ್ಲಿ ಗುರುತಿಸಲಾಗಿದ್ದು ಈ ಪ್ರಕರಣದಲ್ಲಿ ಅದರ ದೃಢೀಕೃತ ಪ್ರತಿಯನ್ನು ನಿಪಿ-13 ಎಂದು ಗುರುತಿಸಲಾಯಿತು.

**ಆರೋಪಿ ಪರವಾಗಿ ಪಾಟೀ ಸವಾಲುಃ ಶ್ರೀ ಆರ್.ಪಿ. ವಕೀಲರಿಂದ**

1.ಘಟನೆ ಮಾಹಿತಿ ಗೊತ್ತಾದ ಮೂರು ಗಂಟೆ ಒಳಗೆ ನಾನು ಘಟನಾ ಸ್ಥಳಕ್ಕೆ ತಲುಪಿರುತ್ತೇನೆ. ನನ್ನ ತಂಗಿಯ ಗಂಡ ಪೋನ್ ಮೂಲಕ ಘಟನೆ ಬಗ್ಗೆ ತಿಳಿಸಿರುತ್ತಾರೆ. ಎರಡು ಮೂರು ತಿಂಗಳಿಗೊಮ್ಮೆ ತಾಯಿ ಮನೆಗೆ ಬಂದು ಹೋಗುತ್ತಿದ್ದೆ. ಸದ್ರಿ ಮನೆ ಯಾವಾಗ ರಿಪೇರಿ ಕೆಲಸ ಪ್ರಾರಂಭಿಸಿರುತ್ತಾರೆ ಎಂದು ಗೊತ್ತಿಲ್ಲ. ಮನೆಯ ಕಾಮಗಾರಿಯನ್ನು ಚಾಸಾ4 ರವರು ನೋಡಿಕೊಳ್ಳುತ್ತಿದ್ದರು. ಚಾಸಾ.8 ರವರು ಕಾಂಟ್ರಾಕ್ಟ್‌ನಲ್ಲಿ ಆ ಮನೆಯ ಕೆಲಸ ಮಾಡುತ್ತಿದ್ದು ಎಲ್ಲೆಲ್ಲಿಂದ ಕೆಲಸಕ್ಕೆ ಜನ ಕರೆದುಕೊಂಡು ಬರುತ್ತಿದ್ದರು ಎಂದು ಗೊತ್ತಿಲ್ಲ. ಆ ಮನೆಯು ಮುಖ್ಯ ರಸ್ತೆಯಿಂದ ನಾಲ್ಕನೇ ಕ್ರಾಸ್ ನಲ್ಲಿದೆ. ರಸ್ತೆಯ ಎರಡೂ ಕಡೆ ಸಾಕಷ್ಟು ವಾಸದ ಮನೆಗಳು ಇವೆ. ನಮ್ಮ ಮನೆ ಮೂರು ಸೆಂಟ್ಸ್ ಜಾಗದಲ್ಲಿದೆ. ಒಬ್ಬರ ಮನೆಯಿಂದ ಇನ್ನೊಬ್ಬರ ಮನೆ ಕಾಣುತ್ತದೆ. ಮನೆಯ ನಾಲ್ಕೂ ಕಡೆ ಇತರ ಮನೆಗಳು ಇವೆ. ಆ ಮನೆಯಲ್ಲಿ ಮಾತನಾಡಿದರೆ ಇತರ ಮನೆಗಳಿಗೆ ಕೇಳುತ್ತದೆ. ನಾನು ಬಂದಾಗ ತುಂಬಾ ಜನ ಸೇರಿದ್ದರು. ನಾವು ಬರುವ ಮುಂಚೆ ಚಾಸಾ.4 ರವರು ಬಿದ್ದುಕೊಂಡಿದ್ದ ನಮ್ಮ ತಾಯಿಗೆ ನೀರು ಕೊಟ್ಟು ಶುಶ್ರೂಷೆ ಮಾಡಿದ್ದರು. ಬೆಳಿಗ್ಗೆ 7-35 ಕ್ಕೆ ಚಾಸಾ.4 ರವರು ಘಟನೆ ಬಗ್ಗೆ ಪೋನ್ ಮಾಡಿ ತಿಳಿಸಿರುತ್ತಾರೆ.

2.ಶ್ವಾನ ದಳದವರು ಘಟನಾ ಸ್ಥಳಕ್ಕೆ ಬಂದಿದ್ದರು. ದೂರನ್ನು ಯಾರ ಹಸ್ತಾಕ್ಷರದಲ್ಲಿ ಬರೆಯಲಾಗಿದೆ ಎಂದು ಗೊತ್ತಿಲ್ಲ. ನಾನು ಆ ದಿನ ಪೋಲಿಸರ ಜೊತೆ ವೈಯಕ್ತಿಕವಾಗಿ ಮಾತನಾಡಿದ್ದು ಇಲ್ಲ. ಘಟನೆಯಾದ ನಂತರ ಮೂರು ದಿನ ತಂಗಿಯ ಮನೆಯಲ್ಲಿದ್ದೆ. ನಂತರ

ಕಾಸರಗೋಡಿಗೆ ಹೋಗಿ ತಾಯಿಯ ಸಮಾರಾಧನೆಗೆ ಬಂದಿರುತ್ತೇನೆ. ಸಮಾರಾಧನೆ ನಂತರ ಪೋಲಿಸ್ ಠಾಣೆಗೆ ಹೋಗಿದ್ದೆ. ಸಮಾರಾಧನೆಯ ನಂತರ ಪ್ರಥಮತಹ ನಾನು ಪೋಲಿಸ್ ಠಾಣೆಗೆ ಹೋಗಿ ಪೋಲಿಸರನ್ನು ಭೇಟಿಯಾಗಿರುತ್ತೇನೆ. ಪೋಲಿಸರು ಎಷ್ಟು ಸಹಿಯನ್ನು ತೆಗೆದುಕೊಂಡಿದ್ದಾರೆ ಎಂದು ನೆನಪಿಲ್ಲ. ಘಟನೆಯಾಗಿ ಮೂರು ವರ್ಷವಾಗಿರುವುದರಿಂದ ನೆನಪಿಲ್ಲ. ನಾನು ಏಳನೇ ತರಗತಿಯವರೆಗೆ ಶಾಲೆಗೆ ಹೋಗಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ಈಗ ತೋರಿಸಿದ ನಿಶಾನೆ ಪಿ-1 ಮತ್ತು 5 ರಲ್ಲಿ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಘಟನೆಯ ಮಾರನೆಯ ದಿನ ಕೃತ್ಯ ಬಗ್ಗೆ ದಿನಪತ್ರಿಕೆಗಳಲ್ಲಿ ಸುದ್ದಿ ಬಂದಿತ್ತು. ಘಟನೆಗೆ ಯಾರು ಕಾರಣ ಎಂದು ಪೋಟೋ ಸಹಾ ಬಂದಿತ್ತು. ದೂರಿನಲ್ಲಿ ತಾಯಿಯ ಚಿನ್ನದ ಆಭರಣಗಳು ಇಟ್ಟ ಸ್ಥಳದಲ್ಲೇ ಇದ್ದವು ಎಂದು ಹೇಳಿದ್ದೇನೋ ನೆನಪಿಲ್ಲ. ಅದರ ಬಗ್ಗೆ ನನಗೆ ನೆನಪಿಲ್ಲ. ಚಿನ್ನದ ಆಭರಣಗಳು ಬೀರುವಿನಲ್ಲಿ ಇತ್ತೋ ಎಂದು ನನಗೆ ಗೊತ್ತಿಲ್ಲ.

3.ನನ್ನ ತಾಯಿಗೆ ಸಂಬಂಧಿಸಿದ ಆಭರಣಗಳ ಬಗ್ಗೆ ನಿಖರವಾಗಿ ಗೊತ್ತಿದೆ. ಚಾಸಾ4 ರವರು ಶವದ ಮುಖದ ಮೇಲೆ ದಿಂಬು ಇತ್ತು ಎಂದು ಹೇಳಿರುವುದರಿಂದ ವಿಚಾರ ತಿಳಿಯಿತು. ನಾನು ಬಂದು ತಲುಪುವಾಗ ಚಾಸಾ.2 ಮತ್ತು 3 ರವರು ಘಟನಾ ಸ್ಥಳದಲ್ಲಿದ್ದರು. ನಾನು ತಲುಪುವ ಮುಂಚೆ ಪೊಲಿಸರು ಚಾಸಾ2 ರಿಂದ ಚಾಸಾ4 ರವರನ್ನು ವಿಚಾರಿಸಿರುತ್ತಾರೆ. ನಾನು ಹಾಗೂ ಚಾಸಾ2 ರಿಂದ 4 ರವರು ನಮ್ಮ ತಾಯಿಯ ಸಮಾರಾಧನೆ ಆದ ನಂತರ ಒಟ್ಟಿಗೆ ಪೋಲಿಸ್ ಠಾಣೆಗೆ ಹೋಗಿರುತ್ತೇವೆ. ಪೋಲಿಸ್ ಠಾಣೆಗೆ ಹೋದಾಗ ಆರೋಪಿತರು ಇದ್ದರು. ಪೋಲಿಸರು ಆರೋಪಿಗಳನ್ನು ಕರೆದುಕೊಂಡು ಬಂದು ತೋರಿಸಿರುತ್ತಾರೆ. ಇವರೇ ನಿಮ್ಮ ತಾಯಿಯನ್ನು ಕೊಲೆ ಮಾಡಿರುತ್ತಾರೆಂದು ಹೇಳಿರುತ್ತಾರೆ.

4. ನಾನು ಹೇಳುವ ರೀತಿ ಪೋಲಿಸರು ಯಾವುದೇ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ಪೋಲಿಸ್ ಠಾಣೆಯಲ್ಲೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮನೆ ರಿಪೇರಿ ಬಗ್ಗೆ ಕಾಂಟ್ರಾಕ್ಟ್ ದಾರರೊಂದಿಗೆ ಲಿಖಿತ ಕರಾರು ಆಗಿಲ್ಲ. ನನ್ನ ತಾಯಿಯ ಯಾವುದೇ ಚಿನ್ನಾಭರಣ ಅಥವಾ ನಗದು ದರೋಡೆ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮತ್ತು ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮನೆ ರಿಪೇರಿ ಕೆಲಸಕ್ಕೆ ಆಳುಗಳಾಗಿ ಬಂದದ್ದೆ ಇಲ್ಲ ಎಂದರೆ ಸರಿಯಲ್ಲ. ಚಾಸಾ4 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಾಯಿಯ ಕೊಲೆಯೇ ಆಗಿಲ್ಲ ಎಂದರೆ ಸರಿಯಲ್ಲ. ಮುಖ್ಯ

ವಿಚಾರಣೆಯಲ್ಲಿ ನಿಶಾನೆಯಾಗಿ ಗುರುತಿಸಿರುವ ದಾಖಲೆಗಳನ್ನು ಹಾಗೂ ಭಾವ ಚಿತ್ರಗಳನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿ ಮನೆಯಲ್ಲಿ ಯಾವುದೇ ಘಟನೆ ನಡೆದೇ ಇಲ್ಲ ಎಂದರೆ ಸರಿಯಲ್ಲ. ಈ ಆರೋಪಿಗೂ ಮತ್ತು ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೋಲಿಸರು ನೀಡಿದ ಮಾಹಿತಿಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ -** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.